

ಉತ್ಸಾಹದಿಂದ ಹೇಳಿಕೊಳ್ಳುತ್ತಾರೆ ಅವರು.

ಈ ಚಿತ್ರದ ಹೊರತಾಗಿ 'ವಸುಂಧರಾ ದೇವಿ' ಎಂಬ ರಾಜಕೀಯ ಕಥನ ಇರುವ ಸಿನಿಮಾದಲ್ಲಿಯೂ ಸೋನು ನಟಿಸುತ್ತಿದ್ದಾರೆ. ರಾಜಕೀಯವನ್ನು ಪ್ರವೇಶಿಸುವ ಮಹಿಳೆಯೊಬ್ಬಳು ತನ್ನ ವೃತ್ತಿಬದುಕು, ಸಾರ್ವಜನಿಕ ಬದುಕು ಮತ್ತು ವೈಯಕ್ತಿಕ ಬದುಕುಗಳನ್ನು ಹೇಗೆ ತೂಗಿಸಿಕೊಂಡು ಹೋಗುತ್ತಾಳೆ ಎಂಬುದೇ ಈ ಸಿನಿಮಾದ ಕಥೆಯಂತೆ. ಇನ್ನು 'ಟೆನೆಂಟ್', 'ನೋಡಿದವರು ಏನಂತಾರೆ?', 'ಶಾಲಿನಿ ಐಎಎಸ್' ಸಿನಿಮಾಗಳಲ್ಲಿಯೂ ಅವರು ನಟಿಸುತ್ತಿದ್ದಾರೆ.

ಹಿರಿತೆರೆಯಲ್ಲಿ ಅವಕಾಶಗಳನ್ನು ಪಡೆಯುತ್ತಿರುವ ಕಾಲದಲ್ಲಿಯೇ ಕಿರುತೆರೆಗೂ ಅತಿಥಿ ಪಾತ್ರದ ಮೂಲಕ ಪ್ರವೇಶಿಸಿದ್ದಾರೆ. ಜೀ ಕನ್ನಡ ವಾಹಿನಿಯ 'ಜೊತೆ ಜೊತೆಯಲಿ' ಧಾರಾವಾಹಿಯಲ್ಲಿ ಅವರು ನಟಿಸುತ್ತಿದ್ದಾರೆ. 'ಎಷ್ಟು ದಿನ ಎಂದು ಬರೀ ಸಿನಿಮಾಕ್ಷೇತ್ರಕ್ಕೆ ಮಾತ್ರ ಸೀಮಿತಗೊಂಡಿರುವುದು? ಈಗ ಪ್ರೇಕ್ಷಕರೇ ಬದಲಾಗುತ್ತಿದ್ದಾರೆ. ವೆಬ್ ಸಿರೀಸ್, ಒಟಿಟಿ ವೇದಿಕೆಗಳನ್ನು ನೋಡುತ್ತಾರೆ. ಸಿನಿಮಾವನ್ನೂ ಮೊಬೈಲ್‌ನಲ್ಲಿಯೇ ನೋಡುತ್ತಾರೆ. ಹೀಗಿರುವಾಗ ನಾವ್ಯಾಕೆ ಬದಲಾಗಬಾರದು? ಬದಲಾಗದೇ ಹೋದರೆ ಜನರನ್ನು ತಲುಪುವ ಅವಕಾಶವನ್ನು ಕಳೆದುಕೊಳ್ಳುತ್ತೇವಲ್ಲವೇ?' ಎನ್ನುತ್ತಾರೆ ಅವರು.

ಹಾಗೆಂದು ಕಿರುತೆರೆಯಲ್ಲಿಯೇ ಮುಂದುವರಿಯುವ ನಿರ್ಧಾರವನ್ನೇನೂ ಅವರು ಮಾಡಿಲ್ಲ. 'ಸದ್ಯಕ್ಕೆ ಧಾರಾವಾಹಿಯಲ್ಲಿ ನಾನು ನಟಿಸುತ್ತಿರುವ ಪಾತ್ರವನ್ನು ಎಂಜಾಯ್ ಮಾಡುತ್ತಿದ್ದೇನೆ. ಈಗಲೇ ನನಗೆ ಕಾಲ್‌ಶೀಟ್‌ಗಳನ್ನು ಹೊಂದಿಸಲು ಕಷ್ಟವಾಗುತ್ತಿದೆ. ಹಾಗಾಗಿ ಮುಂದೆಯೂ ಕಿರುತೆರೆಯಲ್ಲಿ ಮುಂದುವರಿಯುತ್ತೇನೆ ಎಂದು ಹೇಳುವುದು ಕಷ್ಟ. ಆದರೆ ಜನರ ಮನಸಲ್ಲಿ ಉಳಿಯುವುದು ನನ್ನಂಥ ಕಲಾವಿದರ ಉದ್ದೇಶ. ಆ ಅವಕಾಶ ಎಲ್ಲಿಯೇ ಸಿಕ್ಕರೂ ಮುಕ್ತವಾಗಿ ಸ್ವೀಕರಿಸಲು ನಿರ್ಧರಿಸಿದ್ದೇನೆ' ಎಂದು ಸ್ಪಷ್ಟವಾಗಿ ಹೇಳುತ್ತಾರೆ ಸೋನು.

ಸೋನುಗೆ ನಿರ್ಮಾಣ ಸಂಸ್ಥೆಯೊಂದನ್ನು ಹುಟ್ಟುಹಾಕುವ ಇಂಗಿತವೂ ಇದೆ. 'ಆದರೆ ಆ ಆಸೆ ಯಾವಾಗ ಈಡೇರುತ್ತದೆ ಗೊತ್ತಿಲ್ಲ. ಆಸೆಯಂತೂ ಇದೆ' ಎನ್ನುವ ಅವರು ಸದ್ಯಕ್ಕೆ 'ವೆಡ್ಡಿಂಗ್ ಗಿಫ್ಟ್' ಸಿನಿಮಾಗೆ ಪ್ರೇಕ್ಷಕರ ಮೆಚ್ಚುಗೆಯ ಗಿಫ್ಟ್ ದೊರೆಯುತ್ತದೆ ಎಂಬ ನಿರೀಕ್ಷೆಯಲ್ಲಿ ಕಾಯುತ್ತಿದ್ದಾರೆ. ■

ಕಲಾವಿದೆಯೂ ಆಗಿರುವ ಅರ್ಚನಾ, 'ಕೆಜಿಎಫ್' ಚಿತ್ರೀಕರಣ ನಡೆದ ಕೋಲಾರದ ಹುಡುಗಿಯೇ. ಕಿರುತೆರೆಯ ಮೂಲಕ ತಮ್ಮ ವೃತ್ತಿಬದುಕನ್ನು ಆರಂಭಿಸಿದ ಅವರು, 'ಮಹಾದೇವಿ', 'ದುರ್ಗಾ', 'ನೀಲಿ' ಧಾರಾವಾಹಿಗಳಲ್ಲಿ ನಟಿಸಿದ್ದಾರೆ. 'ಕೆಜಿಎಫ್' ಸಿನಿಮಾದಲ್ಲಿ ತಮ್ಮ ವಯಸ್ಸಿಗೆ ಮೀರಿದ ಪಾತ್ರದಲ್ಲಿ ನಟಿಸಿ ಮೆಚ್ಚುಗೆ ಗಳಿಸಿಕೊಂಡಿರುವ ಅರ್ಚನಾಗೆ ಒಂದಿಷ್ಟು ಅವಕಾಶಗಳೇನೋ ಬಂದವಂತೆ. ಆದರೆ ಅವೆಲ್ಲವೂ ಮಾಮೂಲಿ ಜಾಡಿನಲ್ಲಿ ಸಾಗುವ ಕಥೆಗಳಾಗಿದ್ದರಿಂದ ಅವರು ಆಸಕ್ತಿ ತೋರಿಲ್ಲ. 'ಕಡಿಮೆ ಚಿತ್ರಗಳಲ್ಲಿ ನಟಿಸಿದರೂ ಪರವಾಗಿಲ್ಲ. ನೆನಪುಳಿಯುವಂಥ ಪಾತ್ರಗಳಲ್ಲಿ ಕಾಣಿಸಿಕೊಳ್ಳಬೇಕು' ಎಂಬ ನಂಬಿಕೆಯ ಅರ್ಚನಾ, ಕಳೆದ ವರ್ಷ 'ಮ್ಯೂಟ್' ಎನ್ನುವ ಸಿನಿಮಾದಲ್ಲಿ ನಾಯಕಿಯಾಗಿ ನಟಿಸಲು ಒಪ್ಪಿಕೊಂಡಿದ್ದರು.

ಇದೀಗ ಅವರ ಗಮನವೆಲ್ಲ 'ಕೆಜಿಎಫ್ 2' ಬಿಡುಗಡೆಯ ಮೇಲಿದೆ. ಅವರ ಪಾತ್ರಕ್ಕೆ ಮೊದಲ ಭಾಗಕ್ಕಿಂತ ಹೆಚ್ಚಿನ ಪ್ರಾಮುಖ್ಯ ಎರಡನೇ ಭಾಗದಲ್ಲಿ ಇದೆಯಂತೆ. ಈ ಸಿನಿಮಾ ಕುರಿತು ಈಗಾಗಲೇ ಹುಟ್ಟಿರುವ ಹವಾ ತಮ್ಮ ವೃತ್ತಿಜೀವನಕ್ಕೂ ಉಪಯುಕ್ತ ಆಗಬಹುದು ಎಂಬ ಆಶಾವಾದವೂ ಅವರಿಗೆ ಇರುವಂತಿದೆ. ■



# ಬಾನದಾರಿಯಲ್ಲಿ ಗಣೇಶ್ ಮೋಡಿ

'ಮುಂಗಾರು ಮಳೆ' ಸಿನಿಮಾದಲ್ಲಿ ಪ್ರೀತಂ ಗುಬ್ಬಿ ಕಥೆ ಮತ್ತು ಗಣೇಶ್ ನಟನೆಯ ಕಾಂಬಿನೇಷನ್ ಚೆನ್ನಾಗಿಯೇ ಕ್ಲಿಕ್ ಆಗಿತ್ತು. ಅದೇ ಗುಂಗಿನಲ್ಲಿ ಇದೇ ಕಾಂಬಿನೇಷನ್‌ನಲ್ಲಿ ತಯಾರಾದ 'ಮಳೆಯಲಿ ಜೊತೆಯಲಿ' ಸಿನಿಮಾವನ್ನು ಪ್ರೀತಂ ನಿರ್ದೇಶಿಸಿದ್ದರು. ಗಣೇಶ್ ಮುಖ್ಯಪಾತ್ರದಲ್ಲಿ ನಟಿಸಿದ್ದರು. ಮಳೆ, ಮೋಡ, ಹಾಡುಗಳ ತ್ರಿವೇಣಿ ಸಂಗಮಕ್ಕೆ ಜನರ್‍ಯಾಕೋ ಜೈ ಅನ್ನಲಿಲ್ಲ. ಈ ಸಿನಿಮಾದ ಒಂದೊಂದು ಹಾಡುಗಳೂ ಹರೆಯದವರ ಪ್ಲೇಲಿಸ್ಟ್‌ನಲ್ಲಿ ಬಹುಕಾಲ ಉಳಿಯಿತಾದರೂ ಸಿನಿಮಾ ದೊಡ್ಡ ಗೆಲುವು ದಾಖಲಿಸಲಿಲ್ಲ. ಅದೆಲ್ಲ ಆಗಿ ಹನ್ನೆರಡು ವರ್ಷಗಳ ತರುವಾಯ ಈಗ ಮತ್ತೆ ಇದೇ ಜೋಡಿ ಮೋಡಿ ಮಾಡಲು ಹೊರಟಿದೆ. ಈ ನಡುವೆ ಗಣೇಶ್, ಪ್ರೀತಂ ನಿರ್ದೇಶನದ 'ದಿಲ್ ರಂಗೀಲಾ' ಮತ್ತು '99' ಸಿನಿಮಾಗಳಲ್ಲಿಯೂ ನಟಿಸಿದ್ದರು. ಈಗಲೂ ಪ್ರೀತಂ ನೆಲಮುಗಿಲಿನ ನಡುವೆ ಪ್ರೇಮಪತ್ರದಂತೆ ಕೆಲಸ ಮಾಡುವ ಮಳೆಯ ಸಹವಾಸ ಬಿಟ್ಟಂತಿಲ್ಲ. ಈ ಸಲದ ಮಳೆ ಖಂಡಿತ ಒಳ್ಳೆಯ ಫಸಲು ಕೊಡುತ್ತದೆ ಎಂಬ ಆತ್ಮವಿಶ್ವಾಸದಲ್ಲಿ ಅವರು ಇರುವಂತಿದೆ.

'ಬಾನದಾರಿಯಲ್ಲಿ' ಎಂಬುದು ಪ್ರೀತಂ ನಿರ್ದೇಶನದ ಹೊಸ ಸಿನಿಮಾದ ಶೀರ್ಷಿಕೆ. 'ನೋಡು ಎಂಥ ಚಂದ' ಎಂಬ ಅಡಿಸಾಲೂ ಈ ಚಿತ್ರಕ್ಕಿದೆ. ಇದಕ್ಕೆ ಮಳೆಹುಡುಗ ಗಣೇಶ್ ನಾಯಕ. ಸದ್ಯಕ್ಕೆ ಇಬ್ಬರಿಗೂ ಒಂದು ಬ್ರೇಕ್ ಬೇಕಾಗಿದೆ. ಆ ಬ್ರೇಕ್ ಈ ಬಾನದಾರಿಯಲ್ಲಿ ಸಿಗುತ್ತದೆ ಎಂಬ ಮಹತ್ವಾಕಾಂಕ್ಷೆಯಿಂದ ಹೊರಟಿರುವಂತಿದೆ.

ಮೇ ತಿಂಗಳಲ್ಲಿ ಈ ಚಿತ್ರದ ಚಿತ್ರೀಕರಣ ಪ್ರಾರಂಭವಾಗುತ್ತದಂತೆ. ಮೇ ನಂತರ ಬರುವ ಮಳೆಗಾಲವನ್ನೂ ಅವರು ಕಾಯುತ್ತಿರಬಹುದು. ಯುಗಾದಿಯ ದಿನ ಚಿತ್ರದ ಪೋಸ್ಟರ್ ಬಿಡುಗಡೆ ಮಾಡಿದ್ದಾರೆ. ವಿ. ಹರಿಕೃಷ್ಣ ಸಂಗೀತ, ಪ್ರೀತಾ ಜಯರಾಮ್ ಛಾಯಾಗ್ರಹಣ, ದೀಪು ಎಸ್. ಕುಮಾರ್ ಸಂಕಲನ ಈ ಚಿತ್ರಕ್ಕೆ ಇರುತ್ತದೆ. ಚಿತ್ರಕ್ಕಾಗಿ ನಾಯಕಿಯ ಹುಡುಕಾಟ ಇನ್ನೂ ನಡೆಯುತ್ತಿದೆ. ■